**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಳೆನರಸೀಪುರ**

**LAC No**: 253/2004 RW –2

| | |
|---|---|
| ಹೆಸರು | **ರಾಕೇಶ್ ಈ** |
| ತಂದೆ/ಗಂಡನ ಹೆಸರು | **ಲೇಟ್ ಕೆ.ಕೆ. ಈಶ್ವರಯ್ಯ** |
| ವಯಸ್ಸು | **48 ವರ್ಷ** |
| ಉದ್ಯೋಗ | **ಪ್ರಭಾರಿ ಸಬ್ ರಿಜಿಸ್ಟರ್, ಹೊಳೆನರಸೀಪುರ** |
| ವಾಸಸ್ಥಳ | **ಹೊಳೆನರಸೀಪುರ.** |

ದಿನಾಂಕಃ 07.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ 2ನೇ ಎದುರುದಾರರ ಪರ ಶ್ರೀ ಎಸ್.ಹೆಚ್. ಎಂ ವಕೀಲರಿಂದಃ**

ನಾನು ದಿಃ 04.07.2025 ರಿಂದ ನಾನು ಹೊಳೆನರಸೀಪುರದ ಸಬ್ ರಿಜಿಸ್ಟರ್ ಕಚೇರಿಯಲ್ಲಿ ಪ್ರಭಾರ ಸಬ್ ರಿಜಿಸ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ದಿನ ನ್ಯಾಯಾಲಯದ ಆದೇಶದ ಮೇರೆಗೆ ನಾನು ಕಡವಿನಬಾಚನಹಳ್ಳಿ ಗ್ರಾಮಕ್ಕೆ ಸಂಬಂಧಿಸಿದ 1996 ರಿಂದ 1998 ನೇ ಸಾಲಿಗೆ ಸಂಬಧಪಟ್ಟ Sales statistics ಅನ್ನು ಹಾಜರುಪಡಿಸುತ್ತಿದ್ದೇನೆ. ಕಡವಿನಬಾಚನಹಳ್ಳಿ ಗ್ರಾಮದ Sales statistics ಅನ್ನು ನಿಆರ್ 1 ಎಂದು ಗುರುತಿಸಲಾಯಿತು.

ತಾಲ್ಲೂಕು ಮಾರುಕಟ್ಟೆ ಮೌಲ್ಯ ಕಮಿಟಿಯನ್ನು ರಚಿಸಿಕೊಂಡು ಮಾರುಕಟ್ಟೆ ಬೆಲೆಯನ್ನು ನಾವು ನಿರ್ಧರಣೆ ಮಾಡುತ್ತೇವೆ. ಸಬ್ ರಿಜಿಸ್ಟರ್ ಮತ್ತು ಕಾರ್ಯದರ್ಶಿಗಳು ಸದರಿ ಕಮಿಟಿಯಲ್ಲಿ ಸದಸ್ಯರಾಗಿರುತ್ತಾರೆ. ಭೂಮಿಯ ಫಲವತ್ತತೆ ಹಾಗೂ ಕ್ರಯದ ಕರಾರು ಪತ್ರದಲ್ಲಿ ಬರೆದ ಮೊತ್ತಗಳ ಅಂಕಿಅಂಶಗಳ ಆಧಾರದ ಮೇಲೆ ನಾವು ಬೆಲೆಗಳನ್ನು ನಿರ್ಧಾರ ಮಾಡುತ್ತೇವೆ. ಒಂದು ಊರಿನಿಂದ ಇನ್ನೊಂದು ಊರಿಗೆ ಮತ್ತು ಬೇರೆ ಹೋಬಳಿಗಳಿಗೆ ಬೆಲೆಗಳಲ್ಲಿ ವ್ಯತ್ಯಾಸವಿರುತ್ತವೆ. ರಸ್ತೆಗೆ ಹೊಂದಿಕೊಂಡಂತೆ ಇದ್ದರೆ ಒಂದು ಬೆಲೆ ಇರುತ್ತದೆ, ತೋಟ ಇದ್ದರೆ ಮತ್ತೊಂದು ಬೆಲೆ ಇರುತ್ತದ. ನೀರಾವರಿ ಇದ್ದರೆ ಬೇರೆ ಬೆಲೆಯೇ ಇರುತ್ತದೆ. ಕಮೀಷನರ್ ಕಚೇರಿಯಿಂದ ನೀಡಿದ ನಿರ್ದೇಶನದ ಪ್ರಕಾರ 2 ವರ್ಷಗಳಿಗೊಮ್ಮೆ ಬೆಲೆ ನಿರ್ಧರಣೆಯನ್ನು ಮಾಡುತ್ತೇವೆ. ಒಂದು ವೇಳೆ ನಾವು ನಿರ್ಧರಣೆ ಮಾಡಿದ ಬೆಲೆಗಿಂತ ಕ್ರಯ ಪತ್ರದಲ್ಲಿ ಕಡಿಮೆ ಮೊತ್ತವನ್ನು ತೋರಿಸಿದರೆ ನೊಂದಣಿಯನ್ನು ಪೆಂಡಿಂಗ್ ಇಟ್ಟು, ಅದನ್ನು ಜಿಲ್ಲಾ ನೊಂದಣಾಧಿಕಾರಿಗಳ ಕಚೇರಿಗೆ ಬರೆಯುತ್ತೇವೆ. ಒಂದು ವೇಳೆ ನಾವು ನಿರ್ಧರಿಸಿದ ಬೆಲೆಗಿಂತ ಜಾಸ್ತಿ ಬೆಲೆಯನ್ನು ಕ್ರಯ ಪತ್ರದಲ್ಲಿ ತೋರಿಸಿದರೆ ನಾವು ಯಾವುದೇ ತಕರಾರು ಮಾಡುವುದಿಲ್ಲ ಮತ್ತು ಅಷ್ಟೇ ಮೊತ್ತಕ್ಕೆ ಕ್ರಯ ಪತ್ರವನ್ನು ನೊಂದಣಿ ಮಾಡಿಕೊಡುತ್ತೇವೆ. ನಾವು ಬೆಲೆ ನಿರ್ಧರಣೆ ಮಾಡುವಾಗ ಜಮೀನಿಗೆ ಹೋಗಿ ಫಲವತ್ತತೆಯನ್ನು ಪರಿಶೀಲನೆ ಮಾಡುವುದಿಲ್ಲ.

**<u>ಪಾಟೀ ಸವಾಲು ಅರ್ಜಿದಾರರ ಪರ ವಕೀಲರಿಂದಃ</u>**

ಬೆಲೆ ನಿರ್ದರಣೆಯನ್ನು ಮಾರುಕಟ್ಟೆ ಬೆಲೆ ಕಮಿಟಿಯವರು ಮಾಡಿರುತ್ತಾರೆ, ಆ ಪ್ರಕಾರವೇ ನೋಂದಣಿ ಮಾಡಿಕೊಡುಡ್ತೆವೇವೆ ಎಂದರೆ ಹೌದು. ಮಾರುಕಟ್ಟೆ ಕಮಿಟಿಯಮರ ಬೆಲೆ ನಿರ್ಧರಣೆ ಮಾಡಿದ್ದು, ನಾವು ಯಾವುದೇ ವಾಸ್ತವಿಕ ಅಂಶವನ್ನು ವಿಚಾರಣೆ ಮಾಡುವುದಿಲ್ಲ ಎಂದರೆ ಹೌದು. ಪಕ್ಷಗಾರರು ಜಾಸ್ತಿ ಬೆಲೆಗೂ ಕ್ರಯಪತ್ರವನ್ನು ನೋಂದಣಿ ಮಾಡಿಸಿಕೊಳ್ಳಬಹುದು ಅಥವಾ ಕಡಿಮೆ

ಬೆಲೆಗೂ ಸಹಾ ನೋಂದಣಿ ಮಾಡಿಸಿಕೊಳ್ಳಬಹುದು ನಾವು ಪಕ್ಷಗಾರರು ಹಾಜರುಪಡಿಸಿದ ಕ್ರಯಪತ್ರವನ್ನು ನೇಂದಣಿ ಮಾಡುವ ಕರ್ತವ್ಯವನ್ನು ಮಾತ್ರ ಹೊಂದಿರುತ್ತೇವೆ ಎಂದರೆ ಹೌದು. ನಾವು ಎಲ್ ಎ ಸಿ ನಂ.19/2019 ರಲ್ಲಿ ಇದೇ ನ್ಯಾಯಾಲಯದ ಮುಂದೆ ಸಾಕ್ಷಿ ನುಡಿದಿದ್ದೇನೆ ಎಂದರೆ ಹೌದು. ಸದರಿ ಸಾಕ್ಷಿಯ ವಿಚಾರಣೆಯಲ್ಲಿ ಅರ್ಜಿದಾರರ ಪರ ವಕೀಲರು ನನ್ನನ್ನು ಪಾಟೀ ಸವಾಲು ಮಾಡಿರುತ್ತಾರೆ ಎಂದರೆ ಹೌದು. ಸದರಿ ಪಾಟೀ ಸವಾಲಿನಲ್ಲಿ ಹೇಳಿರುವ ವಿಷಯಗಳು ನಿಜ ಇರುತ್ತವೆ ಎಂದರೆ ಹೌದು. ಈಗಾ ನಾನು ನೋಡುತ್ತಿರುವ ದಾಖಲಾತಿ ಎಲ್ ಎ ಸಿ ನಂ.19/2019 ರಲ್ಲಿಯ ನನ್ನ ಡಿಪೋಸಿಶನ್ ನ ದೃ.ಡೀಕೃತ ನಕಲು ಎಂದರೆ ಹೌದು. ಸಾಕ್ಷಿ ಡಿಪೋಸಿಶನ್ ಅನ್ನು ನೋಡಿ ಗುರುತಿಸಿದ್ದರಿಂದ ಅದನ್ನು ಅಭಿಮುಖವಾಗಿ **ನಿಪಿ 24** ಎಂದು ಗುರುತಿಸಲಾಯಿತು.

ನಿ.ಆರ್ .1 ಮಾರುಕಟ್ಟೆ ಬೆಲೆ ಎಂದು ತೋರಿಸಿರುವ ಕಾಲಂ ನಲ್ಲಿ ಇರುವ ಬೆಲೆ ಕಮಿಟಿಯವರು ನಿರ್ಧರಿಸಿದ್ದು, ಹಾಗೂ ಕನ್ಸಿಡರೇಶನ್ ಎನ್ನುವ ಕಾಲಂ ನಲ್ಲಿ ತೋರಿಸಿರುವ ಬೆಲೆ ಪಕ್ಷಗಾರರು ಕ್ರಯ ಪತ್ರದಲ್ಲಿ ಹೇಳಿರುವ ಬೆಲೆ ಎಂದರೆ ಹೌದು. ನಿ ಆರ್ 1 ರಲ್ಲಿ ಕಮಿಟಿ ನಿರ್ಧರಿಸಿದ ಬೆಲೆ ಹಾಗೂ ಕನ್ಸಿಡರೇಶನ್ ಕಾಲಂ ನಲ್ಲಿ ತೋರಿಸಿರುವ ಬೆಲೆಗಳು ಒಂದೇ ಆಗಿವೆ ಎಂದರೆ ಹೌದು. ವಸ್ತು ಸ್ಥಿತಿ ಬೇರೆ ಇದ್ದರೂ ಸಹಾ ಕೇವಲ ಕಮಿಟಿಯವರು ನಿರ್ಧರಿಸಿದ ಬೆಲೆ ತೃಪ್ತಿಪಡಿಸುವ ಸಲುವಾಗಿ ಕ್ರಯಪತ್ರದಲ್ಲಿ ಅದೇ ಬೆಲೆಯನ್ನು ತೋರಿಸಲಗಿರುತ್ತದೆ ಎಂದರೆ ಗೊತ್ತಿಲ್ಲ. ಕೇವಲ ನಾವು ಮಾಡಿಕೊಂಡ ನಿಯಮಗಳನ್ನು ಪಾಲಿಸುವ ಸಲುವಾಗಿ ಮಾತ್ರ ಕ್ರಯಪತ್ರದಲ್ಲಿ ಪಕ್ಷಗಾರರು ಬೆಲೆಯನ್ನು ತೋರಿಸಿರುತ್ತಾರೆಯೇ ಹೊರತು ನಿಜವಾದ ಮಾರಾಟದ ಬೆಲೆಯನ್ನು ತೋರಿಸಿರುವುದಿಲ್ಲ ಎಂದರೆ ಗೊತ್ತಿಲ್ಲ.

**<u>ಮರುವಿಚಾರಣೆಃ ಇಲ್ಲ</u>**

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.